ಯಾವ ಅಸ್ತಿತ್ವವೂ ಇಲ್ಲ" ಎಂದು. **"ನಾನು ಏನೇನೂ ಅಲ್ಲ, ಏನೂ ಇಲ್ಲ"** ಎಂದು ಹಿಂದಿನ ಯಾವ ಅವತಾರಪುರುಷರೂ ಹೇಳಿಲ್ಲವಷ್ಟೆ. ಆದರೆ ಶ್ರೀರಾಮಕೃಷ್ಣರು ಇದನ್ನು ಮತ್ತೆ ಮತ್ತೆ ಹೇಳುತ್ತಿದ್ದರು.

ಈ ಬಗೆಯ ದೈನ್ಯತೆ, ನಿರಹಂಕಾರ ಪರಮಹಂಸರ ಅಂತರ್ಯದಲ್ಲಿದ್ದಷ್ಟು ಬೇರೆ ಯಾವ ಅವತಾರಪುರುಷರಲ್ಲಿಯೂ ಕಾಣಸಿಗದು. ಹಾಗೆಂದು, ಯಾರಾದರೂ ಅವರನ್ನು ಅವತಾರಪುರುಷರೆಂದು ಪ್ರಶಂಸೆ ಮಾಡಿದರೂ, ಅದನ್ನು ಅವರಿಂದ ಸಹಿಸಲಾಗುತ್ತಿರಲಿಲ್ಲ. ಶ್ರೀರಾಮಕೃಷ್ಣರು ಅನಂತಶಕ್ತಿಯ ಅಲೌಕಿಕ ಆಯಾಮದ ಮೇಲೆಯೇ ಹೆಚ್ಚು ವಿಶ್ವಾಸವಿಟ್ಟಿದ್ದರು. ಅವರೊಳಗೆ ಪ್ರಚಂಡಶಕ್ತಿ ಇತ್ತೆಂದು ತಿಳಿದೂ, ನಾವು ಅವರನ್ನು ಒಬ್ಬ ಸಾಮಾನ್ಯವ್ಯಕ್ತಿಯ ಹಾಗೆ ಸ್ವೀಕರಿಸಿದ್ದೇವೆ. ಪ್ರಾಚೀನ ಅವತಾರಗಳನ್ನು ಈ ಬಗೆಯಲ್ಲಿ ಸ್ವೀಕರಿಸಲು ಸಾಧ್ಯವಿಲ್ಲ.

**ಉಪಪ್ರಶ್ನೆ: ಸ್ವಾಮೀಜಿ, ಇನ್ನೊಂದು ವಿಷಯ ಹೇಳಿದಿರಿ, ವ್ಯಾಪಕತೆಯ ದೃಷ್ಟಿಯಲ್ಲಿ ಶ್ರೀರಾಮಕೃಷ್ಣರ ಉಪದೇಶವು ಹೆಚ್ಚು ವಿಶಾಲವಾದದ್ದು ಎಂದು. ಆದರೆ, ಹಿಂದಿನ ಅವತಾರಪುರುಷರ ಉಪದೇಶಗಳು ಕೂಡ ಈಗಲೂ ಜಗತ್ತಿನಾದ್ಯಂತ ಪಸರಿಸುತ್ತಿವೆಯಲ್ಲವೇ?**

**ಸ್ವಾಮೀಜಿ :** ಎಷ್ಟು ದಿನ ಅದು ಸಾಧ್ಯ? ಹೆಚ್ಚು ದಿನ ಸಾಧ್ಯವೇ? ತಂತ್ರಜ್ಞಾನದ ಅಭಿವೃದ್ಧಿಯಿಂದ ಈ ವಿಷಯ ನಮಗೆ ಈಗ ತಿಳಿಯುತ್ತಿದೆ. ಈಗ ನಾವೆಲ್ಲ ಬುದ್ಧನನ್ನು ಅವತಾರವೆನ್ನುತ್ತೇವೆ. ಹಿಂದೆ ಎಷ್ಟು ಜನ ತಾನೇ ಬುದ್ಧನ ಬಗ್ಗೆ ತಿಳಿದಿದ್ದರು? ಬುದ್ಧನ ಪ್ರಭಾವ ಎಷ್ಟರಮಟ್ಟಿಗೆ ತಾನೇ ಆಗಿತ್ತು?

**ಉಪಪ್ರಶ್ನೆ : ಆದರೆ ಸ್ವಾಮೀಜಿ, ಎಲ್ಲಾ ಅವತಾರಗಳೂ ಬಂದಿದ್ದು ಇಡೀ ಪ್ರಪಂಚದ ಕಲ್ಯಾಣಕ್ಕಾಗಿಯೇ ತಾನೆ?**

**ಸ್ವಾಮೀಜಿ :** ಹಾಗೆ ಬಂದದ್ದು ಸರಿಯೇ. ಆದರೆ 'ಜಗತ್ತಿನ ಕಲ್ಯಾಣ' ಎನ್ನುವುದು ಒಂದೊಂದು ಕಾಲದಲ್ಲಿ ಒಂದೊಂದು ರೀತಿಯಲ್ಲಿ ಜರುಗುತ್ತಿರುತ್ತದೆ. ಎಲ್ಲಾ ಕಾಲದಲ್ಲಿಯೂ ಒಂದೇ ತೆರನಾದ ಪ್ರಯೋಜನವೆಂಬುದು ಸಾಧ್ಯವಾಗುವುದಿಲ್ಲ. ಜಗತ್ತು ಕೂಡ ಒಂದೊಂದು ಸಲ ಒಂದೊಂದು ಪ್ರಕಾರ ಗೋಚರಿಸುತ್ತದೆ.

**ಪ್ರಶ್ನೆ: ಸ್ವಾಮೀಜಿ, ವರ್ತಮಾನ ಕಾಲದಲ್ಲಿ ಆಧುನಿಕ ವಿಜ್ಞಾನದ ದೆಸೆಯಿಂದ ಮತ್ತು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಚಾರದ ಸಹಾಯದಿಂದ ಶ್ರೀರಾಮಕೃಷ್ಣರ ಉಪದೇಶ, ಜೀವನಗಳ ವಿಚಾರ ಜಗತ್ತಿನಾದ್ಯಂತ ಹರಡಿದೆ. ಆದರೆ ಉಳಿದ ಅವತಾರಗಳ ವಿಚಾರದಲ್ಲಿ ಹಾಗೆ ಆಗಿಲ್ಲ. ಹಾಗಾದರೆ ಆಯಾ ಅವತಾರಪುರುಷರು ಇತರ ಜನಾಂಗ ಮತ್ತು ದೇಶದವರಿಗೂ ಸೇರಿದ್ದಾರೆಂದು ಸಾಧಿಸಿ ತೋರಿಸಬೇಕೆ?**

**ಸ್ವಾಮೀಜಿ :** ನಾವೀಗ ಮಾತನಾಡುತ್ತಿರುವುದು ಲೆಕ್ಕಾಚಾರದ ಬುದ್ಧಿಯಿಂದ. ಎಲ್ಲ ಅವತಾರಪುರುಷರೂ ಬಂದದ್ದು ಜಗತ್ತಿನ ಕಲ್ಯಾಣಕ್ಕಾಗಿಯೆ. ಆದರೆ ಹಿಂದೆ ಈ ಬಗೆಯ ಪರಿಸ್ಥಿತಿ ಇರಲಿಲ್ಲ. ಕ್ರಿಸ್ತ ಜನ್ಮವೆತ್ತಿದಾಗ ಎಲ್ಲರೂ ನಂಬಿದ್ದು ಆತ ಯಹೂದಿಗಳಿಗಾಗಿ ಮಾತ್ರ ಬಂದಿದ್ದಾನೆಂದು. ಅದೇನೇ ಇರಲಿ, ಕ್ರಿಸ್ತನ ಕಾಲದಲ್ಲಿ ಅವನು ಕಂಡುಕೊಂಡಿದ್ದ ಜಗತ್ತು ಬಹು ಚಿಕ್ಕದಾಗಿತ್ತು. ಎಲ್ಲಿ ಅವನು ಜನಿಸಿದ್ದನೋ ಅದೇ ಅವನ ಜಗತ್ತಾಗಿತ್ತು. ಚೈತನ್ಯದೇವ ಕೂಡ ಅವತಾರಪುರುಷ. ಆದರೆ ಆತನ ಉಪದೇಶದ ಪರಿಧಿ ಕೂಡ ಬಹು ಸೀಮಿತವಾಗಿತ್ತು.

ಹೀಗೆಯೇ ಎಷ್ಟೋ ಕಡೆಗಳಲ್ಲಿ ಅವತಾರಪುರುಷರು ಬಂದು ಹೋಗಿದ್ದಾರೆ, ಅವರೆಲ್ಲರಿಗೂ ಮೇಲಿನ ವಿಚಾರ ಹೊಂದಿಕೆಯಾಗುತ್ತದೆ. ಈಗ ನಾವು ಶ್ರೀಕೃಷ್ಣ ಅಥವಾ ಬುದ್ಧನ ಬಗ್ಗೆ ಏನು ತಿಳಿದಿದ್ದೇವೆಯೋ, ಹಿಂದೆ ಈ ಬಗೆಯಲ್ಲಿ ತಿಳಿಯಲಾಗುತ್ತಿತ್ತೆ? ಜನರಲ್ಲಿ ಈ ಜಗತ್ತಿನ ಬಗೆಗಿನ ಅರಿವು ಹೆಚ್ಚು ವ್ಯಾಪಕವಾದಂತೆ ಅವತಾರದ ಬಗ್ಗೆ ಕೂಡ ಅವರ ಪರಿಜ್ಞಾನವು ಹೆಚ್ಚು ವ್ಯಾಪಕವಾಗುತ್ತ ಪ್ರಸಾರಗೊಳ್ಳುತ್ತಿದೆ. ಈ ದೃಷ್ಟಿಯಲ್ಲಿ, ಶ್ರೀರಾಮಕೃಷ್ಣರ ಲೀಲೆ ಮಾತ್ರ ಅಸಾಧಾರಣವಾದದ್ದು ಎಂದೇ ಹೇಳಬೇಕು. ಇಷ್ಟನ್ನಂತೂ ಹೇಳಬಹುದು: ಶ್ರೀರಾಮಕೃಷ್ಣರ ಹೆಸರನ್ನು ಹಿಂದೆ ಎಷ್ಟು ಜನ ತಾನೇ ಕೇಳಿದ್ದರು ಅಥವಾ ಈಗಲೂ ಎಷ್ಟು ಜನರಿಗೆ ತಾನೇ ಅವರ ಬಗ್ಗೆ ಗೊತ್ತಿದೆ? ಅವರ ಹೆಸರು ಮುಖ್ಯವಲ್ಲ, ಅವರ 'ಭಾವ'ದ ವಿಚಾರವೇ ಮುಖ್ಯ.

ಒಂದು ಘಟನೆ ಕೇಳಿದ್ದೇನೆ. ಅದನ್ನು ನಿಮಗೂ ಹೇಳುತ್ತೇನೆ. ನಮ್ಮ ಒಬ್ಬ ಸಾಧುಗಳು ದಕ್ಷಿಣ ಭಾರತದ ತೀರ್ಥಯಾತ್ರೆಗೆ ಹೋಗಿದ್ದಾಗ, ಯಾವುದೋ ಒಂದು ಪ್ರಸಿದ್ಧವಲ್ಲದ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿ ಸಮೀಪದಲ್ಲಿದ್ದ ಒಂದು ಬೀಡಾ ಅಂಗಡಿಯಲ್ಲಿ ಶ್ರೀಮಾತೆಯವರ ಚಿತ್ರವನ್ನು ನೋಡಿ ಇವರಿಗೆ ಬಹಳ ಆಶ್ಚರ್ಯವಾಯಿತು. ಅವರು ಅಂಗಡಿಯವನನ್ನು ಕೇಳಿದರು, "ಈ ಚಿತ್ರ ನಿಮಗೆ ಎಲ್ಲಿಂದ ಸಿಕ್ಕಿತು?" ಎಂದು. ಅಂಗಡಿಯಾತ ಹೇಳಿದ, "ಎಲ್ಲಿಂದ ಬಂದಿತೆಂದು ನನಗೂ ಗೊತ್ತಿಲ್ಲ. ಆದರೆ ಈ ಚಿತ್ರ ನನ್ನ ಭಾಗ್ಯದೇವತೆಯಾಗಿ ಪರಿಣಮಿಸಿದೆ". ಇದು ಅಚ್ಚರಿಯ ಸಂಗತಿಯಲ್ಲವೆ? ❐

# ನೆನಪಿನಂಗಳದಿಂದ

ಧಾರಾವಾಹಿ

ಪ್ರವ್ರಾಜಿಕಾ ಭಾರತೀಪ್ರಾಣಾ

ಶ್ರೀಮಾತೆಗೆ ದಿನವೂ ಜ್ವರ ಬರುತ್ತಿತ್ತು. ನಾನು ಅವರಿಗೆ ಊಟ ಮಾಡಿಸುವುದು, ಹಾಸಿಗೆ ಸರಿಮಾಡುವುದು, ಸಮಯಕ್ಕೆ ಸರಿಯಾಗಿ ಔಷಧಿ ಕೊಡುವುದು ಮುಂತಾದ ಸೇವೆಗಳನ್ನು ಮಾಡುತ್ತಿದ್ದೆ. ಶ್ರೀಮಾತೆಯ ಶರೀರವೆಲ್ಲಾ ಉರಿಯುತ್ತಿತ್ತು. ನಿವೇದಿತಾ ಸ್ಕೂಲಿನ ಹುಡುಗಿಯರನ್ನು ಸುಧೀರಾ ಅಕ್ಕ ಅವರ ಸೇವೆಗೆ ಕಳುಹಿಸುತ್ತಿದ್ದರು. ಇಡೀ ದಿನ ಅವರಲ್ಲಿ ಒಬ್ಬರಾದ ಮೇಲೆ ಇನ್ನೊಬ್ಬರು ಬಂದು ಶ್ರೀಮಾತೆಗೆ ಗಾಳಿ ಬೀಸುತ್ತಿದ್ದರು. ರಾಧು, ಮಾಕು ಹಾಗೂ ಅವರ ಮಕ್ಕಳನ್ನು ಶ್ರೀಮಾತೆ ತಮ್ಮ ಹತ್ತಿರ ಬರಲೂ ಬಿಡುತ್ತಿರಲಿಲ್ಲ.

ಶ್ರೀಮಾತೆಗೆ ನಾನು ದಿನವೂ ಹಾಲು ಕುಡಿಸಿ, ಥರ್ಮಾಮೀಟರ್ ಇಟ್ಟು ಜ್ವರದ ತಾಪಮಾನವನ್ನು ನೋಡುತ್ತಿದ್ದೆ. ಒಮ್ಮೊಮ್ಮೆ ಅವರು ಹಾಲು ಕುಡಿಯಲು ಸ್ವಲ್ಪ ಕೂಡ ಇಷ್ಟಪಡುತ್ತಿರಲಿಲ್ಲ. ನಾನು ಆಗ, "ಶರತ್ ಮಹಾರಾಜರನ್ನು (ಸ್ವಾಮಿ ಶಾರದಾನಂದ) ಕರೆಯಲೆ?" ಎಂದರೆ ತಕ್ಷಣ ಪುಟ್ಟ ಮಕ್ಕಳಂತೆ ಕೂಡಲೇ ಹಾಲು ಕುಡಿದು ಮುಗಿಸುತ್ತಿದ್ದರು. ರಾತ್ರಿ ಹನ್ನೊಂದು ಗಂಟೆಗೆ ಕಡೆಯ ಬಾರಿ ಹಾಲು ಕುಡಿಸಲಾಗುತ್ತಿತ್ತು. ಒಂದು ದಿನ ರಾತ್ರಿ ಏನೂ ಮಾಡಿದರೂ ಅವರು ಹಾಲು ಕುಡಿಯಲು ಒಪ್ಪದಿದ್ದಾಗ ನಾನು ಹೇಳಿದೆ, "ಹಾಗಿದ್ದರೆ ಅಮ್ಮಾ, ಶರತ್ ಮಹಾರಾಜರನ್ನು ಕರೆದು ಬರುತ್ತೇನೆ." ಶ್ರೀಮಾತೆ ಹೇಳಿದರು, "ಕರೆದುಕೊಂಡು ಬಾ, ಈಗಲೇ ಕರೆ ಶರತ್‌ನನ್ನು." ಆಗ ಎಲ್ಲರೂ ಮಲಗಿಕೊಂಡಿದ್ದರು. ಸ್ವಾಮಿ ಶಾರದಾನಂದರು ತಮ್ಮ ಕೋಣೆಯಲ್ಲಿ ನೆಲದ ಮೇಲೆ ಮಲಗಿದ್ದರು. ನಾನು ಅವರನ್ನು ಕರೆಯದೆ ಶ್ರೀಮಾತೆಯ ಕೋಣೆಗೆ ಮತ್ತೆ ಹಿಂತಿರುಗಿದೆ. ನನ್ನನ್ನು ನೋಡಿದ್ದೇ ತಡ ಶ್ರೀಮಾತೆ, "ಏನು, ಕರೆದು ಬಂದೆಯಾ?" ಎಂದರು. ಮತ್ತೆ ನಾನು ಶಾರದಾನಂದರ ಕೋಣೆಯ ಬಳಿ ಹೋದೆ. ಅವರ ಬಳಿ ನಿಂತು ಸ್ವಲ್ಪ ಶಬ್ದ ಮಾಡುತ್ತಿದ್ದಂತೆ ಅವರು ದಡಬಡನೆ ಎದ್ದು ಕುಳಿತರು. ವಿಷಯವನ್ನೆಲ್ಲಾ ಕೇಳಿ, ಶ್ರೀಮಾತೆಯ ಕೋಣೆಗೆ ಬಂದರು. ಶ್ರೀಮಾತೆಯ ಕೋಣೆಯಲ್ಲಿ ಹಣತೆ ಉರಿಯುತ್ತಿತ್ತು. ಹೊರಗಡೆ ಬಾಗಿಲ ಬಳಿ ಒಂದು ಲಾಟೀನನ್ನು ಇಡಲಾಗಿತ್ತು. ಶ್ರೀಮಾತೆ ಕೇಳಿದರು, "ಏನು ಶರತ್, ಬಂದೆಯಾ?" ನಾನು, "ಹೌದಮ್ಮಾ, ನಿಮ್ಮ ತಲೆಯ ಹತ್ತಿರವೇ ನಿಂತುಕೊಂಡಿದ್ದಾರೆ" ಎಂದೆ. ಶ್ರೀಮಾತೆ, "ಎಲ್ಲಿ? ಬಾರಪ್ಪಾ, ಇಲ್ಲಿ ಬಾ ಕುಳಿತುಕೋ"ಎಂದು ತಮ್ಮ ಹತ್ತಿರ ಬಂದು ಕುಳಿತುಕೊಳ್ಳುವಂತೆ ಹೇಳಿದರು. "ನೋಡು, ಇವಳು ಎಂಥವಳು! ಈ ರಾತ್ರಿ ನಿನ್ನನ್ನೂ ಕರೆದು ಎಬ್ಬಿಸಿ ತೊಂದರೆ ಕೊಟ್ಟಳಲ್ಲಾ!"ಎಂದರು. ಶರತ್ ಮಹಾರಾಜ್ ಶ್ರೀಮಾತೆಯ ತಲೆಯನ್ನು ನೇವರಿಸಿ ನಿಧಾನವಾಗಿ ಕೇಳಿದರು, "ಅಮ್ಮಾ, ಈಗ ಸ್ವಲ್ಪ ಹಾಲು ಕುಡಿಯುತ್ತೀರಾ?" ಶ್ರೀಮಾತೆ ಒಪ್ಪಿಕೊಂಡಾಗ ಶರತ್ ಮಹಾರಾಜ್, "ಸರಳಾ ಬಂದು ಕುಡಿಯಲು ಕೊಡಲಿ" ಎಂದು ಹೇಳಿದರು. ಶ್ರೀಮಾತೆ, "ಬೇಡ, ಅವಳು ಕುಡಿಸುವುದು ಬೇಡ. ದಿನಬೆಳಗಾದರೆ ಬಂದು ಹೇಳುತ್ತಿರುತ್ತಾಳೆ, 'ಅಮ್ಮಾ, ತಿನ್ನಿರಿ', 'ಅಮ್ಮಾ, ಕುಡಿಯಿರಿ' ಎಂದು. ಮತ್ತೆ ಕಂಕುಳಲ್ಲಿ ಕಡ್ಡಿ (ಥರ್ಮಾಮೀಟರ್) ಬೇರೆ ಇಡುತ್ತಾಳೆ. ಇಷ್ಟನ್ನೇ ಅವಳು ಕಲಿತಿರುವುದು. ಅವಳ ಕೈಯಲ್ಲಿ ನಾನು ಕುಡಿಯುವುದಿಲ್ಲ, ನೀನೇ ನನಗೆ ಕುಡಿಸು" ಎಂದು ಹೇಳಿದರು.

ಶಾರದಾನಂದರ ಎದುರು ಶ್ರೀಮಾತೆ ನನ್ನ ಸೇವೆಯನ್ನು ನಿರಾಕರಿಸಿದ್ದು ನನಗೆ ಅತ್ಯಂತ ದುಃಖವನ್ನುಂಟುಮಾಡಿತು. ಆದರೂ ಎದುರಿಗೆ ನಗುಮುಖ ತೋರಿಸುತ್ತಿದ್ದೆ. ನಾನು ಲಾಟೀನನ್ನು ಹತ್ತಿರ ತಂದು ಬಟ್ಟಲಲ್ಲಿ ಹಾಲನ್ನು ಸುರಿದು ಕೊಟ್ಟೆ. ಶರತ್ ಮಹಾರಾಜ್ ಸ್ವಲ್ಪ ಸ್ವಲ್ಪವಾಗಿ ಶ್ರೀಮಾತೆಯ ಬಾಯಿಗೆ ಹಾಲನ್ನು ಹಾಕಲಾರಂಭಿಸಿದರು. ಮಧ್ಯಮಧ್ಯದಲ್ಲಿ "ಅಮ್ಮಾ ಸ್ವಲ್ಪ ಸುಧಾರಿಸಿಕೊಂಡು ಕುಡಿಯಿರಿ" ಎನ್ನುತ್ತಿದ್ದರು.

ಶ್ರೀಮಾತೆ, "ನೋಡು, ಎಷ್ಟು ಚೆನ್ನಾಗಿ ಹೇಳುತ್ತಾನೆ, 'ಅಮ್ಮಾ, ಸ್ವಲ್ಪ ಸುಧಾರಿಸಿಕೊಂಡು ಕುಡಿಯಿರಿ' ಎಂದು. ಇಂಥ ಒಂದು ಮಾತು ಇನ್ನು ಉಳಿದವರ ಬಾಯಿಂದ ಹೊರಡುವುದಿಲ್ಲ" ಎಂದರು. ಅವರು ಹಾಲು ಕುಡಿದ ಮೇಲೆ ಶರತ್ ಮಹಾರಾಜ್ ಅವರ ಹಾಸಿಗೆಯನ್ನು ಸರಿಮಾಡಿ, ಸೊಳ್ಳೆಪರದೆಯನ್ನು ಕೆಳಗೆ ಬಿಟ್ಟು, ಅದನ್ನು ಸುತ್ತಲೂ ಸರಿಯಾಗಿ ಸಿಕ್ಕಿಸಿ ಹೇಳಿದರು, "ಅಮ್ಮಾ ನಾನಿನ್ನು ಬರಲೆ?" ಮರುದಿನ ನಾನು ಶರತ್ ಮಹಾರಾಜರಿಗೆ ಹೇಳಿದೆ, "ಶ್ರೀಮಾತೆಗೆ ನನ್ನ ಕೆಲಸ ಮೆಚ್ಚುಗೆಯಾಗುತ್ತಿಲ್ಲವೆಂದು ಕಾಣುತ್ತದೆ. ನಾನಿನ್ನು ಅವರಿಗೆ ಹಾಲು ಕುಡಿಸಲು ಹಾಗೂ ಥರ್ಮಾಮೀಟರ್ ಇಡಲು ಹೋಗುವುದಿಲ್ಲ. ಮರೆಯಲ್ಲಿದ್ದು ಎಲ್ಲಾ ಸಿದ್ಧಮಾಡಿಕೊಡುತ್ತೇನೆ." ಶಾರದಾನಂದರು, "ನೀನೇ ಅವರಿಗೆ ಊಟ ಮಾಡಿಸಬೇಕು" ಎಂದರು. ಅದಕ್ಕೆ ನಾನು ಹೇಳಿದೆ, "ನಾನು ಊಟ ಮಾಡಿಸುತ್ತೇನೆ. ಬೇರೆ ಕೆಲಸ ಎಲ್ಲಾ ಮಾಡುತ್ತೇನೆ. ಆದರೆ ಹಾಲು ಕುಡಿಸುವುದು, ಥರ್ಮಾಮೀಟರ್ ಇಡುವುದನ್ನು ಬೇರೆ ಯಾರಾದರೂ ಮಾಡಲಿ."